**ಕರ್ನಾಟಕ ಸರ್ಕಾರ**

**ಮೀನುಗಾರಿಕೆ ನಿರ್ದೇಶನಾಲಯ**

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001

ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

---

**ಹಿಂ.ಸಂಖ್ಯೆ:DOF TECHO/RMK/47/2022, E-1009748** **ದಿನಾಂಕ: 14/02/2023**

ಸರ್ಕಾರದ ಆದೇಶ ಸಂಖ್ಯೆ/ಪಸಂಮೀ/ಇ-99/ಮೀಇಯೋ/2022, ದಿನಾಂಕ:04/02/2023 ರಲ್ಲಿ 2022-23 ನೇ ಸಾಲಿಗೆ ಹಂಚಿಕೆ ಮಾಡಲಾದ 5000 ಮನೆಗಳ ಪೈಕಿ ಬಾಕಿ ಉಳಿದ 947 ಮನೆಗಳ ಪೈಕಿ 702 ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ (ನಿ), ಮಂಗಳೂರು ಇವರ ಮೂಲಕ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

ಹಂಚಿಕೆ ಮಾಡಲಾದ ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಾಗೂ ವರ್ಗವಾರು ಹಂಚಿಕೆ ಮಾಡಿ ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಫಲಾನುಭವಿಗಳ ಆಯ್ಕೆಗೆ ಈ ಕೆಳಕಂಡ ವಿಧಾನಗಳನ್ನು ಪಾಲಿಸಿ, ಯೋಜನೆಯನ್ನುಅನುಷ್ಠಾನಗೊಳಿಸಲು ತಿಳಿಸಲಾಗಿದೆ.

1. ಫಲಾನುಭವಿಗಳ ಆಯ್ಕೆಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮತ್ತು ಮಾನದಂಡಗಳನ್ನು ಪಾಲಿಸತಕ್ಕದ್ದು. ಹಾಗೂ ಸರ್ಕಾರ ಮತ್ತು ನಿರ್ದೇಶನಾಲಯವು ಕಾಲಕಾಲಕ್ಕೆ ನೀಡುವ ಆದೇಶ ಮತ್ತು ನಿರ್ದೇಶನಗಳನ್ನು ಪಾಲಿಸತಕ್ಕದ್ದು.
2. ಸರ್ಕಾರದ ಆದೇಶ ಸಂಖ್ಯೆ/ಪಸಂಮೀ/112/ಮೀಇಯೋ/2017 (ಭಾಗ), ದಿನಾಂಕ:31-7-2008 ಮತ್ತು ಸಂಖ್ಯೆ/ಪಸಂಮೀ/ಇ-275/ಮೀಇಯೋ/2021, ದಿನಾಂಕ:04-10-2021 ರಲ್ಲಿ ತಿಳಿಸಿದಂತೆ, ಆಯ್ಕೆ ಸಮಿತಿಯ ಅಧ್ಯಕ್ಷರಾದ ಮಾನ್ಯ ಶಾಸಕರು, ವಿಧಾನಸಭೆ ಮತ್ತು ಸಹ ಅಧ್ಯಕ್ಷರಾದ ಮಾನ್ಯ ಶಾಸಕರು, ವಿಧಾನ ಪರಿಷತ್ ರವರನ್ನು ಒಳಗೊಂಡ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು.
3. ಸಹ ಅಧ್ಯಕ್ಷರಾದ ಮಾನ್ಯ ಶಾಸಕರು, ವಿಧಾನ ಪರಿಷತ್ ರವರು, ಅವರ ವ್ಯಾಪ್ತಿಯ ಅಪೇಕ್ಷಿಸಿದ ಯಾವುದಾದರೊಂದು ವಿಧಾನಸಭಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿರುವುದನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳ ಕಚೇರಿಯಿಂದ ಅಧಿಕೃತವಾಗಿ ಪಡೆದು ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು.
4. ಜಿಲ್ಲಾ ಮಟ್ಟದ ಅಧಿಕಾರಿಗಳು ಫಲಾನುಭವಿಗಳನ್ನು ಅನುಮೋದನೆ ಮಾಡುವ ಮೊದಲು ಆಯ್ಕೆ ಸಮಿತಿಯ ನಡವಳಿಯನ್ನು ಕಡ್ಡಾಯವಾಗಿ ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಪಡೆಯುವುದು.
5. ತಾಲ್ಲೂಕು ಮಟ್ಟದ ಅಧಿಕಾರಿಗಳು ಫಲಾನುಭವಿಗಳನ್ನು 31 ನೇ ಮಾರ್ಚ್ 2023 ರೊಳಗೆ ಕಡ್ಡಾಯವಾಗಿ ಆಯ್ಕೆ ಮಾಡಿ ಫ್ರಿಮ್ಸ್ ತಂತ್ರಾಂಶದಲ್ಲಿ ಇಂದೀಕರಿಸಿ, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸುವುದು.
6. ಜಿಲ್ಲಾ ಮಟ್ಟದ ಅಧಿಕಾರಿಗಳು ಪ್ರಸ್ತಾವನೆಯನ್ನು ಪರಿಶೀಲಿಸಿ 16 ನೇ ಏಪ್ರಿಲ್ 2023 ರರೊಳಗಾಗಿ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡುವುದು.
7. ಫಲಾನುಭವಿಗಳ ಪಟ್ಟಿಗೆ ಅನುಮೋದನೆ ದೊರೆತ ಕೂಡಲೇ ಮನೆ ನಿರ್ಮಾಣಕ್ಕೆ ಕಾರ್ಯಾದೇಶವನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳು ನೀಡುವುದು.

8. ಹಂತವಾರು ಹಣ ಪಾವತಿಗಾಗಿ ಪ್ರಸ್ತಾವನೆಯನ್ನು ನಿಯಮಾನುಸಾರ ಜಿ.ಪಿ.ಎಸ್. ಛಾಯಾಚಿತ್ರದೊಂದಿಗೆ ಫ್ರಿಮ್ಸ್ ತಂತ್ರಾಂಶದಲ್ಲಿ ಅಳವಡಿಸಿ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ(ನಿ), ಮಂಗಳೂರು ರವರಿಗೆ ಸಲ್ಲಿಸುವುದು.

ಮೇಲೆ ತಿಳಿಸಿರುವಂತೆ ಅಗತ್ಯ ದಾಖಲೆಗಳನ್ನು ಜಿಲ್ಲೆ ಮತ್ತು ತಾಲ್ಲೂಕು ಅಧಿಕಾರಿಗಳು ಅವರ ಕಛೇರಿಯಲ್ಲಿ ಇಟ್ಟುಕೊಳ್ಳತಕ್ಕದ್ದು, ನಿರ್ದೇಶನಾಲಯ ಬಯಸಿದಾಗ ಈ ದಾಖಲೆಗಳನ್ನು ಕಳುಹಿಸತಕ್ಕದ್ದು. ದಾಖಲೆಗಳನ್ನು ಇಟ್ಟುಕೊಳ್ಳದೇ ಕರ್ತವ್ಯ ಲೋಪವೆಸಗಿದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು

ಅಡಕ: ಸರ್ಕಾರದ ಆದೇಶ

Ramachandra

ಮೀನುಗಾರಿಕೆ ನಿರ್ದೇಶಕರು

ಗೆ,

ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ

ಪ್ರತಿ: ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ

ಪ್ರತಿ: ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ

ಪ್ರತಿ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ (ನಿ), ಹೊಯ್ಗೆ ಬಜಾರ್, ಮಂಗಳೂರು, ರವರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿ: ಇ-ಆಡಳಿತ ಸಂಕಲನಕ್ಕೆ - ಫ್ರಿಮ್ಸ್ ತಂತ್ರಾಂಶದಲ್ಲಿ ಅಳವಡಿಸಲು

ಪ್ರತಿ : ರಾಮಿಕ ದಾಸ್ತಾನು ಕಡತಕ್ಕೆ

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-99 ಮೀಇಯೋ 2022, ಬೆಂಗಳೂರು ದಿನಾಂಕ: 04-02-2023 ರ ರಂತೆ 2022-23 ನೇ ಸಾಲಿನಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ವಿಧಾನಸಭಾಕ್ಷೇತ್ರವಾರು ಹಂಚಿಕೆ ಮಾಡಲಾದ 702 ಮನೆಗಳ ವರ್ಗವಾರು ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ವಿಧಾನಸಭಾಕ್ಷೇತ್ರ | ಹಂಚಿಕೆ ಮಾಡಲಾದ ಒಟ್ಟು ಮನೆಗಳಸಂಖ್ಯೆ | ಸಾಮಾನ್ಯ ವರ್ಗ | ಪರಿಶಿಷ್ಟ ಜಾತಿ | ಪರಿಶಿಷ್ಟ ವರ್ಗ |
|---|---|---|---|---|---|---|
| 1 | ಕೋಲಾರ | ಮುಳಬಾಗಿಲು | 20 | 15 | 4 | 1 |
| 2 | ಉತ್ತರಕನ್ನಡ | ಕಾರವಾರ | 75 | 57 | 13 | 5 |
| 3 | ಉತ್ತರಕನ್ನಡ | ಹಳಿಯಾನ | 25 | 19 | 4 | 2 |
| 4 | ಉತ್ತರಕನ್ನಡ | ಶಿರಸಿ | 10 | 7 | 2 | 1 |
| 5 | ಬಾಗಲಕೋಟೆ | ಮುಧೋಳ | 2 | 2 | 0 | 0 |
| 6 | ವಿಜಯಪುರ | ಸಿಂಧಗಿ | 10 | 7 | 2 | 1 |
| 7 | ವಿಜಯಪುರ | ಬಸವನಬಾಗೇವಾಡಿ | 10 | 7 | 2 | 1 |
| 8 | ರಾಮನಗರ | ಕನಕಪುರ | 20 | 15 | 4 | 1 |
| 9 | ಮಂಡ್ಯ | ಶ್ರೀರಂಗಪಟ್ಟಣ | 20 | 15 | 4 | 1 |
| 10 | ಮೈಸೂರು | ಹೆಚ್.ಡಿ.ಕೋಟೆ | 20 | 15 | 4 | 1 |
| 11 | ಮೈಸೂರು | ಕೃಷ್ಣರಾಜ | 25 | 19 | 4 | 2 |
| 12 | ಮೈಸೂರು | ಪಿರಯಪಟ್ಟಣ | 15 | 11 | 3 | 1 |
| 13 | ಉಡುಪಿ | ಉಡುಪಿ | 100 | 76 | 17 | 7 |
| 14 | ದಕ್ಷಿಣಕನ್ನಡ | ಮಂಗಳೂರು | 40 | 30 | 7 | 3 |
| 15 | ದಕ್ಷಿಣಕನ್ನಡ | ಪುತ್ತೂರು | 25 | 19 | 4 | 2 |
| 16 | ದಕ್ಷಿಣಕನ್ನಡ | ಸುಳ್ಯ | 40 | 30 | 7 | 3 |
| 17 | ದಕ್ಷಿಣಕನ್ನಡ | ಬಂಟ್ವಾಳ | 25 | 19 | 4 | 2 |
| 18 | ದಕ್ಷಿಣಕನ್ನಡ | ಮೂಡಬಿದ್ರೆ | 25 | 19 | 4 | 2 |
| 19 | ದಕ್ಷಿಣಕನ್ನಡ | ಬೆಳ್ತಂಗಡಿ | 25 | 19 | 4 | 2 |
| 20 | ಬೆಂಗಳೂರು (ನ) | ಯಲಹಂಕ | 20 | 15 | 4 | 1 |
| 21 | ಬೆಂಗಳೂರು (ನ) | ಕೆ.ಆರ್.ಪುರ | 15 | 11 | 3 | 1 |
| 22 | ಬೆಂಗಳೂರು (ನ) | ಬ್ಯಾಡರಾಯನಪುರ | 15 | 11 | 3 | 1 |
| 23 | ಬೆಂಗಳೂರು (ನ) | ಯಶವಂತಪುರ | 15 | 11 | 3 | 1 |
| 24 | ಬೆಂಗಳೂರು (ನ) | ಆರ್.ಆರ್.ನಗರ | 15 | 11 | 3 | 1 |
| 25 | ಬೆಂಗಳೂರು (ನ) | ಮಹಾಲಕ್ಷ್ಮೀಲೇಔಟ್ | 15 | 11 | 3 | 1 |
| 26 | ಬೆಂಗಳೂರು (ನ) | ಮಲ್ಲೇಶ್ವರಂ | 15 | 11 | 3 | 1 |
| 27 | ಬೆಂಗಳೂರು (ಗ್ರಾ) | ದೇವನಹಳ್ಳಿ | 10 | 7 | 2 | 1 |
| 28 | ಹಾವೇರಿ | ಶಿಗ್ಗಾಂವ್ | 10 | 7 | 2 | 1 |
| 29 | ಬಳ್ಳಾರಿ | ಹಡಗಲಿ | 10 | 7 | 2 | 1 |
| 30 | ಚಿತ್ರದುರ್ಗ | ಮೊಳಕಾಲ್ಮೂರು | 15 | 11 | 3 | 1 |
| 31 | ದಾವಣಗೆರೆ | ಹೊನ್ನಾಳಿ | 10 | 7 | 2 | 1 |
| 32 | ಶಿವಮೊಗ್ಗ | ಭದ್ರವಾತಿ | 5 | 4 | 1 | 0 |
| | | ಒಟ್ಟು | 702 | 525 | 127 | 50 |

Ramachandra

ಮೀನುಗಾರಿಕೆ ನಿರ್ದೇಶಕರು

15/2-23

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ 5000 ಮನೆಗಳ ಪೈಕಿ ಹಂಚಿಕೆ ಮಾಡಿ ಬಾಕಿ ಉಳಿದ 947 ಮನೆಗಳ ಪೈಕಿ 702 ಮನೆಗಳನ್ನು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇವರ ಮೂಲಕ ಅನುಷ್ಠಾನಗೊಳಿಸಲು ವಿವಿಧ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-99/ಮೀಇಯೋ/2022, ದಿನಾಂಕ: 07-04-2022.

2) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-99/ಮೀಇಯೋ/2022, ದಿನಾಂಕ: 03-11-2022

3) ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಏಕ ಕಡತ ಪತ್ರ ಸಂಖ್ಯೆ: DoF-TECHORAMK/47/2022, ದಿನಾಂಕ: 27-11-2022.

07 FEB 2023

******

**ಪ್ರಸ್ತಾವನೆ:**

2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-63 ರಲ್ಲಿ ಪ್ರಸಕ್ತ ಸಾಲಿನಲ್ಲಿ 5000 ವಸತಿರಹಿತ ಮೀನುಗಾರರಿಗೆ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಆದ್ಯತೆ ಮೇರೆಗೆ ಮನೆಗಳನ್ನು ನಿರ್ಮಿಸಲಾಗುವುದು ಎಂದು ಘೋಷಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-63 ರಂತೆ, ವಸತಿ ಇಲಾಖೆಯಡಿ ಹೊಸದಾಗಿ ಮಂಜೂರಾಗಿರುವ 5.00 ಲಕ್ಷ ಮನೆಗಳಲ್ಲಿ ಆದ್ಯತೆ ಮೇರೆಗೆ 5000 ವಸತಿರಹಿತ ಮೀನುಗಾರರಿಗೆ ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಜಾರಿಯಲ್ಲಿರುವ ಸಹಾಯಧನ ಮಾದರಿಯಂತೆ ಹಾಗೂ ನಿಗಮದ ಮಾನದಂಡಗಳನ್ನೊಳಗೊಂಡಂತೆ ಮನೆಗಳನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ದಿನಾಂಕ: 07-04-2022 ರ ಆದೇಶದಲ್ಲಿ ವಸತಿರಹಿತ ಮೀನುಗಾರರಿಗೆ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ 5000 ಮನೆಗಳನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುವುದನ್ನು ಭಾಗಶಃ ಮಾರ್ಪಡಿಸಿ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇದರ ಮೂಲಕ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಸದರಿ 5000 ಮನೆಗಳಲ್ಲಿ 4053 ಮನೆಗಳನ್ನು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇವರ ಮೂಲಕ ಅನುಷ್ಠಾನಗೊಳಿಸಲು ಆದೇಶದ ಅನುಬಂಧದಲ್ಲಿ ನಮೂದಿಸಿರುವಂತೆ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಏಕ ಕಡತ ಪತ್ರದಲ್ಲಿ 2022-23 ನೇ ಸಾಲಿನ ಮತ್ಸ್ಯಾಶ್ರಯ ಯೋಜನೆಯಡಿ 5000 ಮನೆಗಳಲ್ಲಿ 4053 ಮನೆಗಳನ್ನು ಹಂಚಿಕೆ ಮಾಡಿ ಬಾಕಿ ಉಳಿದ 947 ಮನೆಗಳನ್ನು ವಿವಿಧ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ 5000 ಮನೆಗಳಲ್ಲಿ 4053 ಮನೆಗಳನ್ನು ಹಂಚಿಕೆ ಮಾಡಿ ಬಾಕಿ ಉಳಿದ 947 ಮನೆಗಳ ಪೈಕಿ 702 ಮನೆಗಳನ್ನು ವಿವಿಧ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-99 ಮೀಇಯೋ 2022, ಬೆಂಗಳೂರು ದಿನಾಂಕ: 04-02-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ 5000 ಮನೆಗಳಲ್ಲಿ 4053 ಮನೆಗಳನ್ನು ಹಂಚಿಕೆ ಮಾಡಿ ಬಾಕಿ ಉಳಿದ 947 ಮನೆಗಳ ಪೈಕಿ 702 ಮನೆಗಳನ್ನು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇವರ ಮೂಲಕ ಅನುಷ್ಠಾನಗೊಳಿಸಲು ಈ ಆದೇಶದ **ಅನುಬಂಧ**ದಲ್ಲಿ ನಮೂದಿಸಿರುವಂತೆ ವಿವಿಧ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಎಂ. ಶುಭಶ್ರೀ 4.2.2023
(ಕೆ.ಎಂ. ಶುಭಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

04/02/2023

**ಇವರಿಗೆ**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
4) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
5) ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
6) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿ., ಐಟಿ ಪಾರ್ಕ್, 1ನೇ ಮಹಡಿ, 4ನೇ ಮುಖ್ಯ ರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು-560 020.
8) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ., ಹೊಯಿಗೆ ಬಜಾರ್, ಮಂಗಳೂರು.

-3-

9) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
11) ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
12) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
13) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
14) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
15) ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
16) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

**ಪ್ರತಿಯನ್ನು**

**1)** ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.

**ಆದೇಶ ಸಂಖ್ಯೆ: ಪಸಂಮೀ ಇ-99 ಮೀಇಯೋ 2022, ಬೆಂಗಳೂರು ದಿನಾಂಕ: 04-02-2023 ರ ಅನುಬಂಧ**

**2022-23ನೇ ಸಾಲಿನಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾದ ಮನೆಗಳ ವಿವರ**

| ಕ್ರಮ ಸಂಖ್ಯೆ | ಜಿಲ್ಲೆ | ವಿಧಾನ ಸಭಾ ಕ್ಷೇತ್ರ | ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ |
|---|---|---|---|
| 1 | ಕೋಲಾರ | ಮುಳಬಾಗಿಲು | 20 |
| 2 | ಉತ್ತರ ಕನ್ನಡ | ಕಾರವಾರ | 75 |
| 3 | ಉತ್ತರ ಕನ್ನಡ | ಹಳಿಯಾಳ | 25 |
| 4 | ಉತ್ತರ ಕನ್ನಡ | ಶಿರಸಿ | 10 |
| 5 | ಬಾಗಲಕೋಟೆ | ಮುಧೋಳ | 02 |
| 6 | ವಿಜಯಪುರ | ಸಿಂಧಗಿ | 10 |
| 7 | ವಿಜಯಪುರ | ಬಸವನಬಾಗೇವಾಡಿ | 10 |
| 8 | ರಾಮನಗರ | ಕನಕಪುರ | 20 |
| 9 | ಮಂಡ್ಯ | ಶ್ರೀರಂಗಪಟ್ಟಣ | 20 |
| 10 | ಮೈಸೂರು | ಹೆಚ್.ಡಿ.ಕೋಟೆ | 20 |
| 11 | ಮೈಸೂರು | ಕೃಷ್ಣರಾಜ | 25 |
| 12 | ಮೈಸೂರು | ಪಿರಿಯಾಪಟ್ಟಣ | 15 |
| 13 | ಉಡುಪಿ | ಉಡುಪಿ | 100 |
| 14 | ದಕ್ಷಿಣ ಕನ್ನಡ | ಮಂಗಳೂರು | 40 |
| 15 | ದಕ್ಷಿಣ ಕನ್ನಡ | ಪುತ್ತೂರು | 25 |
| 16 | ದಕ್ಷಿಣ ಕನ್ನಡ | ಸುಳ್ಯ | 40 |
| 17 | ದಕ್ಷಿಣ ಕನ್ನಡ | ಬಂಟ್ವಾಳ | 25 |
| 18 | ದಕ್ಷಿಣ ಕನ್ನಡ | ಮೂಡಬಿದ್ರೆ | 25 |
| 19 | ದಕ್ಷಿಣ ಕನ್ನಡ | ಬೆಳ್ತಂಗಡಿ | 25 |
| 20 | ಬೆಂಗಳೂರು ನಗರ | ಯಲಹಂಕ | 20 |
| 21 | ಬೆಂಗಳೂರು ನಗರ | ಕೆ.ಆರ್.ಪುರ | 15 |
| 22 | ಬೆಂಗಳೂರು ನಗರ | ಬ್ಯಾಡರಾಯನಪುರ | 15 |
| 23 | ಬೆಂಗಳೂರು ನಗರ | ಯಶವಂತಪುರ | 15 |
| 24 | ಬೆಂಗಳೂರು ನಗರ | ಆರ್.ಆರ್.ನಗರ | 15 |
| 25 | ಬೆಂಗಳೂರು ನಗರ | ಮಹಾಲಕ್ಷ್ಮೀ ಲೇಔಟ್ | 15 |
| 26 | ಬೆಂಗಳೂರು ನಗರ | ಮಲ್ಲೇಶ್ವರಂ | 15 |
| 27 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | 10 |

| | | | |
|---|---|---|---|
| 28 | ಹಾವೇರಿ | ಶಿಗ್ಗಾಂವ್ | 10 |
| 29 | ಹಾವೇರಿ | ಹಡಗಲಿ | 10 |
| 30 | ಚಿತ್ರದುರ್ಗ | ಮೊಳಕಾಲ್ಮೂರು | 15 |
| 31 | ದಾವಣಗೆರೆ | ಹೊನ್ನಾಳಿ | 10 |
| 32 | ಶಿವಮೊಗ್ಗ | ಭದ್ರಾವತಿ | 05 |
| | ಒಟ್ಟು | | 702 |

(ಕೆ.ಎಂ. ಶುಭಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)